ಸಿ.ಸಿ.. 144/2019

ಪಿಡಬ್ಲ್ಯೂ: 1

ದಿನಾಂಕ : 17-03-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು : 1 ನೇ ಆರೋಪಿ ಪರ ಶ್ರೀ ಎ. ಎ.ಪಿ. ವಕೀಲರಿಂದ :**

1) ಮೊಬೈಲಗಳನ್ನು ಕಂಪನಿಯಿಂದ ತರಿಸುವ ಕಾಲಕ್ಕೆ ಯಾವ ಮೊಬೈಲಗಳು ಬೇಕು ಎಂಬುವುದಕ್ಕೆ ನಾವು ಇಂಡೆಂಟಗಳನ್ನು ಹಾಕುವುದಿಲ್ಲ. ಕಂಪನಿಯಿಂದ ಮೊಬೈಲ್ ಬರುವಾಗ ಆ ಬಗ್ಗೆ ಬಿಲ್ಲುಗಳು ಮತ್ತು ಬಾಕ್ಸ ಬರುತ್ತದೆ. ನಾವು ಕಂಪನಿಗಳಿಗೆ ಫೋನ್ ಮುಖಾಂತರ ಹೇಳಿ ಹೊಸ ಮೊಬೈಲಗಳನ್ನು ಮಾರಾಟ ಮಾಡುವ ಸಲುವಾಗಿ ನಮ್ಮ ಅಂಗಡಿಗೆ ತರಿಸಿಕೊಳ್ಳುತ್ತೇವೆ. ನಮ್ಮ ಪಿರ್ಯಾಧಿಯಲ್ಲಿ ಯಾವ ಯಾವ ಫೋನಗಳನ್ನು ಮಾರಾಟ ಮಾಡುವ ಸಲುವಾಗಿ ತರಿಸಿಕೊಂಡು ನಮ್ಮ ಅಂಗಡಿಯಲ್ಲಿ ಇಟ್ಟಿದ್ದೆವು ಎಂಬುದನ್ನು ನಮೂದಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಪಿರ್ಯಾದಿಯನ್ನು ಬರೆಸಿರುವುದಿಲ್ಲ ಮತ್ತು ಯಾವ ಫೋನನ ಮುಖಾಂತರ ನಾನು ಕಂಪನಿಗಳಿಗೆ ತಿಳಿಸಿ ಯಾವ ಫೋನಗಳನ್ನು ಮಾರಾಟಕ್ಕಾಗಿ ತರಿಸಿಕೊಂಡಿರುತ್ತೇನೆ ಎಂದು ಪಿರ್ಯಾದಿಯಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

2) ನನ್ನ ಮೊಬೈಲ್ ಶಾಪನಲ್ಲಿ ಇನ್ನೊರ್ವ ನನ್ನ ಅಣ್ಣನಾದ ಚಾಸಾ-5 ರವರು ಸಹ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿ ಫೋನಗಳನ್ನು ನಾನು ತರಿಸಿರುತ್ತೇನೋ ಅಥವಾ ಚಾಸಾ-5 ನನ್ನ ಅಣ್ಣ ತರಿಸಿರುತ್ತಾರೋ ಎಂಬ ವಿಷಯವನ್ನು ನನ್ನ ಪಿರ್ಯಾದಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಫೋನಗಳು, ಬಾಕ್ಸ ಮತ್ತು ಇತ್ಯಾದಿ ಚೆಲ್ಲಾಪಿಲ್ಲಿ ಆಗಿದ್ದವು ಎಂದು ನನ್ನ ಪಿರ್ಯಾಧಿಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪೋಲೀಸನವರು ಘಟನಾ ಸ್ಥಳಕ್ಕೆ ಬಂದ ನಂತರವೇ ನಾವು ಅವರೊಂದಿಗೆ ಅಂಗಡಿಯ ಒಳಗೆ ಹೋಗಿ ನೋಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಹಾಗೆ ಅಂಗಡಿಯ ಒಳಗೆ ಹೋಗಿ ನೋಡಿದಾಗ ಬಾಕ್ಸಗಳು ಕೂಡ ಚೆಲ್ಲಾಪಿಲ್ಲಿಯಾಗಿದ್ದವು.

3) ಹಾಗೆ ಚೆಲ್ಲಾಪಿಲ್ಲಿ ಆಗಿ ಬಿದ್ದಿದ್ದ ಬಾಕ್ಸಗಳನ್ನು ಪೋಲೀಸರು ಪಂಚನಾಮೆ ಕಾಲದಲ್ಲಿ ಜಪ್ತು ಪಡಿಸಿಕೊಂಡಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೆಳಗೆ ಎರಡು ಬಾಕ್ಸಗಳು ಮಾತ್ರ ಬಿದ್ದಿದ್ದವು . ಹಾಗೆ ಪೋಲೀಸರು ಪಂಚನಾಮೆ ಮಾಡಿ ಅವುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಘಟನೆಯಾದ ನಂತರ ನಾನು ಪೋಲೀಸ್ ಠಾಣೆಗೆ ಸುಮಾರು 3 ರಿಂದ 4 ಸಲ ಹೋಗಿರುತ್ತೇನೆ. ನಾನು ಮೊದಲ ಬಾರಿಗೆ ದೂರನ್ನು ನೀಡಲು ಮತ್ತು ಎರಡನೇ ಬಾರಿಗೆ ಬಿಲ್ಲುಗಳನ್ನು ಸರಿಯಾಗಿ ಜೋಡಿಸಿ ಪರಿಶೀಲಿಸಲು ನನ್ನ ಅಂಗಡಿಗೆ ಹೋಗಿರುತ್ತೇನೆ. ಮೊದಲ ಬಾರಿಗೆ ದಿಃ 18.12.2018 ರಂದು ಪಿರ್ಯಾದಿ ನೀಡಲು ಮತ್ತು ದಿಃ 19.12.2018 ರಂದು ಠಾಣೆಗೆ ಬಿಲ್ಲುಗಳುನ್ನು ಜೋಡಿಸಿ ಹಾಜರುಪಡಿಸಲು ಹೋಗಿರುತ್ತೇನೆ ಎಂದು ಉತ್ತರಿಸುತ್ತಾರೆ. 3 ನೇ ಬಾರಿಗೆ ಪೋಲೀಸರು ಕದ್ದ ಮಾಲುಗಳು ಸಿಕ್ಕಿರುತ್ತದೆ ಎಂದು ಮಾಹಿತಿ ಕೊಟ್ಟು ಬರಹೇಳಿದ್ದು, ಅದರಂತೆ ನಾನು ಪೋಲೀಸ್ ಠಾಣೆಗೆ ದಿಃ 28.12.2018 ಹೋಗಿರುತ್ತೇನೆ ಎಂದು ಉತ್ತರಿಸುತ್ತಾರೆ. ಪೋಲೀಸರು ದಿಃ 28.12.2018 ರಂದು ಆರೋಪಿತರನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದಿರುತ್ತಾರೆ. ಹಾಗೆ ಪೋಲೀಸರು ಆರೋಪಿತರುಗಳನ್ನು ಕರೆದುಕೊಂಡು ಬಂದು

ಪಂಚನಾಮೆಯನ್ನು ತಯಾರಿಸಿರುತ್ತಾರೆ. ಆ ಸಮಯದಲ್ಲಿ ನಾನು ಘಟನಾ ಸ್ಥಳವನ್ನು ಪೋಲೀಸರಿಗೆ ತೋರಿಸಿರುತ್ತೇನೆ ಮತ್ತು ಘಟನೆಯ ಪೂರ್ವದಲ್ಲಿ ಹಾಗೂ ನಂತರದ ನನ್ನ ಅಂಗಡಿಯ ಸ್ಥಿತಿಗತಿಗಳ ಬಗ್ಗೆ ಪೋಲೀಸರಿಗೆ ತೋರಿಸಿರುತ್ತೇನೆ. ಅದನ್ನು ಹೊರತು ಪಡಿಸಿ ಬೇರೆ ಏನು ಮಾಡಿರುವುದಿಲ್ಲ. ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಎಲ್ಲಿ  ಮಾಲುಗಳು ದೊರಕಿರುತ್ತದೆ ಎಂಬುದನ್ನು ನನಗೆ ತಿಳಿಸಿರುವುದಿಲ್ಲ ಆದರೆ ಇಬ್ಬರು ಪಂಚರುಗಳನ್ನು ಕರೆದುಕೊಂಡು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/ –
ಜೆಎಂಎಫ್‌ಸಿ, ಬ್ಯಾಡಗಿ.

ಸಿ.ಸಿ.. 144/2019

ಪಿಡಬ್ಲ್ಯೂಃ 1

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)